ಮತ್ತು ಅವನ ಹೆಂಡತಿಗೆ ಪ್ರಸ್ತುತ ನಡೆಯುತ್ತಿರುವ ವಿದ್ಯಮಾನ ಭ್ರಮೆಯೋ, ವಾಸ್ತವವೋ ಎಂಬ ಅನುಮಾನ ಬಂದಿತ್ತು. ಮೂವರಿಗೂ ಪ್ಲೇಟುಗಳಲ್ಲಿ ವೆಂಕಟೇಶ್ವರ ಸ್ವೀಟ್ಸ್‌ನಿಂದ ತರಿಸಿದ್ದ ಮೈಸೂರು ಪಾಕ್ ಮತ್ತು ಚೌಚೌ ಹಾಕಿ ಕೊಟ್ಟು ಬಿಸಿಬಿಸಿ ಕಾಫಿಯನ್ನು ಕೊಟ್ಟಿದ್ದರು. ಅನಂತರ ಖುದ್ದು ಅಡಿಷನಲ್ ಕಮಿಷನರ್ ಸಾಹೇಬರೇ ತಮ್ಮ ಸೀಟಿನಿಂದ ಎದ್ದು ಬಂದು ಮೇಷ್ಟ್ರ ಕೊರಳಿಗೆ ದೊಡ್ಡ ಮಲ್ಲಿಗೆ ಹೂವಿನ ಹಾರ ಹಾಕಿ, ಹೆಗಲ ಮೇಲೆ ದೊಡ್ಡ ಉಲ್ಲನ್ ಶಾಲು ಹೊದಿಸಿದ್ದರು. ಹಣ್ಣಿನ ಬುಟ್ಟಿಯನ್ನು ಮಗ ಇಸಿದುಕೊಂಡರೆ, ಕಾವೇರಿ ಎಂಪೋರಿಯಂನಿಂದ ತಂದಿದ್ದ ಸರಸ್ವತಿ ಫೋಟೊವನ್ನು ಸೊಸೆ ಇಸಿದುಕೊಂಡಿದ್ದಳು. ದೇವೇಗೌಡ ತನ್ನ ಮೊಬೈಲ್ ಫೋನಿನಿಂದ ಸಾಕಷ್ಟು ಫೋಟೊಗಳನ್ನು ಕ್ಲಿಕ್ಕಿಸಿದ್ದ. ಎರಡು ಸಾವಿರ ರೂಪಾಯಿಯ ಮೂರು ನೋಟುಗಳನ್ನು ಪೆಂಚಾಲಯ್ಯ ಮೇಷ್ಟ್ರ ಜೇಬಿಗೆ ಇಟ್ಟು ಕೈ ಮುಗಿದಿದ್ದ. ಮಹದೇವಪ್ಪನವರು ಪ್ರೀತಿಯಿಂದ ಪೆಂಚಾಲಯ್ಯನ ಕೈ ಸವರಿ ಕಣ್ಣಲ್ಲಿ ನೀರು ತುಂಬಿಕೊಂಡಿದ್ದರು. ಟೈಪಿಸ್ಟ್ ಬಂದು ಕಂಪ್ಯೂಟರ್ ಮುಂದೆ ಕುಳಿತಾಗ ಅಡಿಷನಲ್ ಕಮಿಷನರ್ ಸಾಹೇಬ್ರು, "ಪೆಂಚಾಲಯ್ಯನನ್ನು ಸ್ಕೂಲಿಗೆ ನೀವೇ ಸೇರಿಸಿಕೊಂಡಿದ್ದಾ?" ಎಂದು ಕೇಳಿದ್ದರು. "ಪೆಂಚಾಲಯ್ಯ ಒಬ್ಬನೇ ಏನ್ಸಾರ್ ಇವನಂಥ ಸುಮಾರು ಮೂರ್ನಾಲ್ಕು ಸಾವಿರ ಮಕ್ಕಳ್ನ ನನ್ನ ಸರ್ವೀಸಿನಲ್ಲಿ ಸ್ಕೂಲಿಗೆ ಸೇರಿಸಿಕೊಂಡಿರ್ಬೇಕು." ಎಂದು ಎದೆಯುಬ್ಬಿಸಿ ಹೇಳಲು ಹೋಗಿ ಸ್ವಲ್ಪ ಕೆಮ್ಮಿದ್ದರು ಮೇಷ್ಟ್ರು. "ಪೆಂಚಾಲಯ್ಯನ ಡೇಟ್ ಆಫ್ ಬರ್ತ್ ಬರೆದದ್ದು ನೀವೇನಾ?" ಮತ್ತೆ ಕೇಳಿದ್ದರು ಅಡಿಷನಲ್ ಕಮಿಷನರ್. "ಆ ಕಾಲದಲ್ಲಿ ಹೆಡ್ ಮೇಷ್ಟ್ರೂ ನಾನೇ, ಜವಾನನೂ ನಾನೇ. ಹುಡುಗ್ರು ಕಿಟಕಿ ಬಾಗಿಲು ತೆರೆಯೋದು, ಹಾಕೋದು, ಕಸ ಗುಡಿಸೋದು ಮಾಡ್ತಿದ್ರು. ಈವಾಗಿನಂಗೆ ನಾಜೂಕಿನ ಕಾಲ ಅಲ್ಲ ಸಾರ್ ಅದು, ಕೆಲವು ಮಕ್ಕಳು ಸ್ಕೂಲಿನಲ್ಲೇ ಹೇತ್ಕಂಬೋರು." ಎಂದು ನಕ್ಕಿದ್ದರು. "ಪೆಂಚಾಲಯ್ಯನ ಹುಟ್ಟಿದ ದಿನಾಂಕವನ್ನು ತಪ್ಪಾಗಿ ಬರೆದಿದ್ದೀರಿ ನೀವು ಸ್ಕೂಲಿಗೆ ಸೇರಿಸಿಕೊಳ್ಳುವಾಗ. ಫೆಬ್ರುವರಿ ಇಪ್ಪತ್ತೆಂಟು ಅಂತ ದಾಖಲಿಸೋದನ್ನು ಫೆಬ್ರುವರಿ ಮೂವತ್ತು ಅಂತ ದಾಖಲಿಸಿದ್ದೀರಿ. ಫೆಬ್ರುವರಿ ತಿಂಗಳಲ್ಲಿ ಮೂವತ್ತನೆ ತಾರೀಖು ಬರೋದೇ ಇಲ್ವಲ್ಲಾ?" ಎಂದಿದ್ದರು ಅಡಿಷನಲ್ ಕಮಿಷನರ್. ಮಹದೇವಪ್ಪನವರು, "ಅಯ್ಯೋ ಯಾವುದೋ ಜ್ಞಾನದಲ್ಲಿ ಬರೆದಿರ್ಬೇಕು ಸಾರ್, ಅದೇನ್ ದೊಡ್ಡ ಲೆಕ್ಕಾ. ನಿಮ್ಮಂಥ ಆಫೀಸರ್ರುಗಳು ತಿದ್ದೊಬಹುದು ಬಿಡಿ. ಇನ್ನ ನಮ್ಮ ಪೆಂಚಾಲಯ್ಯ ಬಲೊಳ್ಳೆ ಹುಡ್ಗ ಆಗಿದ್ದ. ತಂಟೆಗಿಂಟೆ ಮಾಡ್ತಿರ್ಲಿಲ್ಲ. ಅದಕ್ಕೆ ಬೆಂಗಳೂರಿನ ಇಂಥ ಆಫೀಸಿನಾಗೆ ಕೆಲ್ಸ ಸಿಕ್ಕೈತೆ." ಎಂದು ಜಂಬದಿಂದ ಉತ್ತರಿಸಿದ್ದರು.

ಕಂಪ್ಯೂಟರ್ ಮುಂದೆ ಕುಳಿತಿದ್ದ ಟೈಪಿಸ್ಟ್ ಅಡಿಷನಲ್ ಕಮಿಷನರ್ ಮತ್ತು ಮೇಷ್ಟ್ರು ಮಹದೇವಪ್ಪನವರ ಸಂಭಾಷಣೆಯನ್ನು ಯಥಾವತ್ತಾಗಿ ಟೈಪ್ ಮಾಡಿ ಪ್ರಿಂಟೌಟ್ ತೆಗೆದಿದ್ದ. ಅದರ ಮೇಲೆ ಒಂದು ಕಡೆ ಅಡಿಷನಲ್ ಕಮಿಷನರ್ ಸೈನು ಮಾಡಿ, ಇನ್ನೊಂದು ಕಡೆ ಮೇಷ್ಟ್ರು ಕೈನಲ್ಲಿ ಸೈನು ಮಾಡಿಸಿದ್ದರು. "ನಮ್ಮ ಮನವಿಗೆ ಬೆಲೆ ಕೊಟ್ಟು ಊರಿನಿಂದ ಬಂದದ್ದಕ್ಕಾಗಿ ಧನ್ಯವಾದಗಳು." ಎಂದು ಮೇಷ್ಟ್ರಿಗೆ ಕೈ ಮುಗಿದಿದ್ದರು ರಾಜೇಂದ್ರ ಪ್ರಸಾದ್ ಸಾಹೇಬರು. "ಸಾರ್ ನಿಮ್ಮದು, ಪೆಂಚಾಲಯ್ಯನದು ದೊಡ್ಡ ಮನಸ್ಸು. ದೇವರು ನಿಮ್ಮನ್ನು ತಣ್ಣಗೆ ಇಟ್ಟಿರ್ಲಿ." ಎಂದು ಆಶೀರ್ವಾದದಂತೆ ನುಡಿದಿದ್ದರು ಮೇಷ್ಟ್ರು. ವಿಷಯ ತಿಳಿದು ಖುದ್ದು ಕಮಿಷನರ್ ಸಾಹೇಬರೇ ಅಡಿಷನಲ್ ಕಮಿಷನರ್ ಚೇಂಬರಿಗೆ ಬಂದು ಪೆಂಚಾಲಯ್ಯನ ಗುರುಗಳ ದರ್ಶನ ಮಾಡಿಕೊಂಡು, ಒಂದು ನಮಸ್ಕಾರ ಮಾಡಿ ನಿರ್ಗಮಿಸಿದ್ದರು! ಪೆಂಚಾಲಯ್ಯ ಮೇಷ್ಟ್ರನ್ನು, ಮಗ ಹಾಗೂ ಸೊಸೆಯನ್ನು ಚೇಂಬರಿನಿಂದ ಹೊರಕ್ಕೆ ಕರೆದುಕೊಂಡು ಬಂದು ಮಧುಗಿರಿ ಶಂಕರ್ ಬಾರ್ ಮತ್ತು ರೆಸ್ಟೋರೆಂಟ್‌ನಲ್ಲಿ ಮಾತುಕೊಟ್ಟಂತೆ ಮೇಷ್ಟ್ರಿಗೆ ಕಾಣದಂತೆ ಲೇಪಾಕ್ಷಿಯ ಜೇಬಿಗೆ ಐದು ಸಾವಿರ ತುರುಕಿದ್ದನು. ತಾನೂ ಅವರು ಬಂದಿದ್ದ ಕಾರಿನಲ್ಲೇ ಕುಂತು ವಿಧಾನಸೌಧ ಮತ್ತು